# ವಾರ್ಸಾ

## ಮೇರಿ ಕ್ಯೂರಿಯ ಸ್ಮೃತಿಚಿತ್ರಗಳ ತವರು

**ಪೋಲೆಂಡ್‌ನ ವಾರ್ಸಾ, ಮೇರಿ ಕ್ಯೂರಿಯ ತವರು. ಆಕೆಯ ಬಾಲ್ಯ, ತಾರುಣ್ಯ ಹಾಗೂ ವಿಜ್ಞಾನಿಯಾಗಿ ಮಾಡಿದ ಸಾಧನೆಗಳ ಹಲವು ನೆನಪುಗಳು ವಾರ್ಸಾದ ಮಣ್ಣಿನಲ್ಲಿವೆ.**



ವಾರ್ಸಾದಲ್ಲಿ ಮೇರಿಯ ಪ್ರತಿಮೆ

**■ ಸಿಡ್ನಿ ಶ್ರೀನಿವಾಸ್**

ಆಗಸ್ಟ್ 9, 2022. ನಮಗೆ ಎಲ್ಲಿಲ್ಲದ ಸಡಗರ. ಪೋಲೆಂಡ್‌ನ ವಾರ್ಸಾದಲ್ಲಿ ಈಗ ಮ್ಯೂಸಿಯಂ ಆಗಿರುವ ಮೇರಿ ಕ್ಯೂರಿ ಹುಟ್ಟಿದ ಮನೆಗೆ ಹೋದ ದಿನವದು.

ಈ ವಸ್ತು ಸಂಗ್ರಹಾಲಯ ಇರುವುದು ವಾರ್ಸಾದ ಹಳೆಯ ಭಾಗದಲ್ಲಿನ 'ನಂಬರ್ 16 ಫ್ರೆಟ್ಟಾ ಬೀದಿ'ಯಲ್ಲಿ. ನಾವು ತಂಗಿದ್ದ ಹೋಟೆಲಿಗೆ ಸಮೀಪವಿದ್ದುದರಿಂದ ನಡೆದೇ ಹೊರಟೆವು. ವಾರ್ಸಾದ ಹಳೆಯ ಪಟ್ಟಣ ಬಹಳ ಆಕರ್ಷಣೀಯ. ಎಲ್ಲೆಲ್ಲಿಯೂ ಶಾಲೆ ಮತ್ತು ಚರ್ಚುಗಳು. ಅಲ್ಲಿದ್ದ ವಾರ್ಸಾ ವಿಶ್ವವಿದ್ಯಾಲಯ ನಮ್ಮನ್ನು ಸೆಳೆಯಿತು. ಒಳ ಪ್ರವೇಶಿಸಿದೆವು. ಹಳೆಯ ಕಾಲದ ಕಟ್ಟಡಗಳು. ಸಾಮಾನ್ಯವಾಗಿ ಯೂರೋಪಿನ ಎಲ್ಲಾ ವಿಶ್ವವಿದ್ಯಾಲಯಗಳ ಕಟ್ಟಡಗಳು ಒಂದೇ ತರಹ ಇರುತ್ತವೆ. ಇವೂ ಹಾಗೆಯೇ. ಅಲ್ಲಿ ಕಂಡು ಬಂದ ವಿಭಾಗಗಳನ್ನು, ನೂರಾರು ವರ್ಷಗಳಿಂದ ಮೆರೆಯುತ್ತಿರುವ ಮರಗಳನ್ನು ಮೆಚ್ಚಿ ಮುಂದುವರೆದವು. ಅಲ್ಲಿ ನಮಗೆ ಸಿಕ್ಕ ಒಬ್ಬ ವಿದ್ಯಾರ್ಥಿಯನ್ನು 'ಮೇರಿ ಕ್ಯೂರಿ ಮ್ಯೂಸಿಯಂಗೆ ಹೋಗುವುದು ಹೇಗೆ?' ಎಂದು ಕೇಳಿದೆ. 'ಬಹಳ ಸುಲಭ. ಈ ಬಾಗಿಲಿನಿಂದ ಹೊರಹೋಗಿ, ಇದೇ ರಸ್ತೆಯಲ್ಲಿ ನಡೆದರೆ ಸೇತುವೆ ಸಿಗುತ್ತದೆ. ನಂತರ ಇರುವುದೇ ಮ್ಯೂಸಿಯಂ'. ಆತ ತೋರಿದ ದಾರಿಯಲ್ಲಿ ನಡೆದಾಗ ಎದುರಾದದು 'ಮೇರಿ ಕ್ಯೂರಿ ವೈಜ್ಞಾನಿಕ ಕೇಂದ್ರ', ಮ್ಯೂಸಿಯಂ ಅಲ್ಲ. ಇದಂತೂ ಅತ್ಯಾಧುನಿಕ ಕಟ್ಟಡ. ಮತ್ತೆ ಅವರಿಂದ ದಾರಿ ಕೇಳಿದ್ದಾಯಿತು. 'ನೇರ ಹೋಗಿ, ಎಡಕ್ಕೆ ತಿರುಗಿ. ಹಳೆಯ ವಾರ್ಸಾ ಸಿಗುತ್ತದೆ. ನಂತರ ಬಲಕ್ಕೆ ತಿರುಗಿ'.

ಬಿಸಿಲಿನ ಚುರುಕು ಬೇರೆ. ನಾವು ಟ್ಯಾಕ್ಸಿ ಹಿಡಿಯಬೇಕಿತ್ತೇನೋ! ನಡೆದೇ ಹೊರಟೆವು. ಎಡಕ್ಕೆ ತಿರುಗಿದಾಗ ಅಲ್ಲಿ ಕಾಣಿಸಿದ ಓರ್ವ ಸೈಕಲ್ ಸವಾರಿಣಿಯನ್ನು ಮಾತಿಗೆ ನಿಲ್ಲಿಸಿದೆವು. 'ನೀವು ಎಲ್ಲಿಯವರು?' ಎಂದಳು. 'ಸಿಡ್ನಿ' ಎಂದ ಕೂಡಲೇ, 'ನಾನೂ ಸಿಡ್ನಿಯವಳೇ... ಇದು ನನ್ನ ತಾಯಿ ಇರುವ ಊರು' ಎಂದೆಲ್ಲಾ ಹೇಳಿ ನಮಗೆ ದಾರಿ ತೋರಿಸಿದಳು. 'ಅಲ್ಲಿ ಕಾಣುವ ಮೆಟ್ಟಿಲುಗಳನ್ನೇರಿ ಬಲಕ್ಕೆ ತಿರುಗಿದರೆ ಅಲ್ಲಿಯೇ ಇದೆ, ಫ್ರೆಟ್ಟಾ ಬೀದಿ' ಎಂದವಳೇ ಸೈಕಲ್ ಏರಿದಳು.

ನಾವು ಮತ್ತೂ ನಡೆದೆವು. ನಮ್ಮ ಗುರಿ ಹಿಂದಕ್ಕೆ ಮತ್ತು ಹಿಂದಕ್ಕೆ ಸರಿಯುತ್ತಿತ್ತು. ಕೊನೆಗೆ ಮತ್ತೊಬ್ಬ ಮಹನೀಯ ಸಿಕ್ಕಿ, 'ಅಲ್ಲಿ ಕಾಣುತ್ತದಲ್ಲ ಕೆಂಪು ಇಟ್ಟಿಗೆಯ ಕಟ್ಟಡ, ಅದನ್ನು ದಾಟಿ. ಅಲ್ಲಿಂದ ಫ್ರೆಟ್ಟಾ ಬೀದಿ ಆರಂಭವಾಗುತ್ತದೆ' ಎಂದ. ಹಾಗೇ ನಡೆದೆವು. ಅಲ್ಲಿಯೇ ಇತ್ತು '16 ಫ್ರೆಟ್ಟಾ ಬೀದಿ'. 'ಮ್ಯೂಸಿಯಂ ಮೇರಿ ಸ್ಕ್ಲೋಡೌಸ್ಕಿ ಕ್ಯೂರಿ' ಎಂಬ ಫಲಕವನ್ನು ನೋಡಿ, ಅಂತೂ ಬಂದೆವು ಎಂದು ಮುಂದೆ ನಿಂತೆವು.

ಅಂಗಡಿಗಳು ಮತ್ತು ರೆಸ್ಟೋರೆಂಟುಗಳ ಮಧ್ಯೆ ಇರುವ ಮನೆ ಇದು. ಸಂಸ್ಥೆಯ ಉಪನಿರ್ದೇಶಕಿ ಅಲೆಕ್ಸಾಂಡ್ರಾ ಮತ್ತು ನಮ್ಮ ಗೈಡ್ ಮಿಲ್ಕಾ ಕಿಟಕಿಯ ಮೂಲಕ ನಮ್ಮನ್ನು ನೋಡಿ ಬಾಗಿಲು ತೆರೆದರು.

'ಇನ್ನೂ ಮ್ಯೂಸಿಯಂ ತೆರೆದಿಲ್ಲ. ಆದರೂ ಒಳಗೆ ಬನ್ನಿ' ಎಂದವರೇ, ಅಲ್ಲಿಯ ಕಚೇರಿಗೆ ನಮ್ಮನ್ನು ಕರೆದೊಯ್ದು ಟೀ ಮತ್ತು ಬಿಸ್ಕತ್ತುಗಳನ್ನು ನೀಡಿ ಉಪಚರಿಸಿದರು.

ಅಲೆಕ್ಸಾಂಡ್ರಾ ನಮಗೆ ಸ್ಥಳದ ಪರಿಚಯ ಮಾಡಿಕೊಟ್ಟರು.

'ಮೇರಿ ಅಥವಾ ಮಾನ್ಯಾ ಹುಟ್ಟಿದ್ದು ಇಲ್ಲಿಯೇ. ಅವಳ ತಾಯಿ ಬ್ರಾನಿಸ್ಲಾವಾ ಇದರ ಪಕ್ಕದ ಶಾಲೆಯ ಮುಖ್ಯೋಧ್ಯಾಪಕಿಯಾಗಿದ್ದಳು. ಹೀಗಾಗಿ ಅವಳಿಗೆ ಈ ಮನೆಯ ಕೆಳ ಅಂತಸ್ತನ್ನು ವಾಸಕ್ಕಾಗಿ ಕೊಡಲಾಗಿತ್ತು. ನಂತರ ಅವಳ ಗಂಡನಿಗೆ ಒಳ್ಳೆಯ ಹುದ್ದೆ ದೊರೆತಾಗ



ಮೇರಿ ಧರಿಸುತ್ತಿದ್ದ ಉಡುಪು